ಕವಿತೆ

# ದುಃಖಕ್ಕೆ ವಿಳಾಸವಿಲ್ಲ

ತೊಳೆಯುತ್ತಿದ್ದಾಳೆ ಎಂಬತ್ತರ ಹಾಡಿನ ಲಯದಲ್ಲಿ
ಆ ಮೂಲೆ ಕಿಟಕಿಯೊಳಗೆ ಮಾಸ್ಕ್ ಧರಿಸಿದಾಕೆ

ಮಿಕ್ಕೆಲ್ಲವನ್ನೂ ಮುಳುಗಿಸುತ್ತಿದೆ ಈ ಮಟ ಮಟ ಮಧ್ಯಾಹ್ನ
ರೋಲರ್ ಸ್ಕೇಟಿಂಗ್ ಆಡುತ್ತಿರುವ ಮಕ್ಕಳ ಕೇಕೆ

ಮಾಡುತ್ತಿದ್ದಾಳೆ ವಾಕಿಂಗ್ – ಕೈಯಲ್ಲಿ ಫೋನು
ಯಾರ ಜೊತೆಗೋ ಮಾತು – ಸುಡುತ್ತಿದೆ ಬಿಸಿಲು ಅಂತರವನ್ನು

ಬಾಲ್ಕನಿಯಲ್ಲಿ ನೇಸರನ ನೆರಿಗೆ ಜೊತೆ ಆಡುತ್ತಿದ್ದೇನೆ ಕಣ್ಣಾಮುಚ್ಚಾಲೆ ನಾನು
ಎಣಿಸುತ್ತ ಕನ್ನಡದಲ್ಲಿ ಒಗ್ಗರಣೆಯಂತೆ ಹಾರುವ ಇಂಗ್ಲಿಷ್ ಪದಗಳನ್ನು

ಕೈ ಒರೆಸುತ್ತ ನೈಟಿಯಲ್ಲಿ ಮುಂಬಾಗಿಲು ತೆರೆದು ಇಣುಕುತ್ತಾಳೆ
ಮತ್ತೆ ಹಿಂದೆ ಸರಿದು ಬಾಗಿಲ ದೂಡಿ ನಡೆಯುತ್ತಾಳೆ

ಹೀಗೆಯೇ ಹೊರಟುಹೋದದ್ದು ಅಜ್ಜಿ, ಮರೆಯಾದದ್ದು ಬೆಕ್ಕು
ಒಬ್ಬರಾದ ಮೇಲೆ ಇನ್ನೊಬ್ಬರಂತೆ ಯಾವುದೋ ತಿರುವಲ್ಲಿ

ದಾಟಿ, ಮರಳಿ ಕೂಡಲೇ ಬರುತ್ತೇನೆ ಎನ್ನುವಂತೆ
ಆದರೂ ಯಾರಿಗೂ ಏನನ್ನೂ ಹೇಳದಂತೆ.

● **ಸ್ನೇಹಜಯಾ ಕಾರಂತ**
ಕಲೆ: ಡಿ.ಕೆ. ರಮೇಶ್

